(ಇಂದು ದಿನಾಂಕಃ **05-03-2026** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲು -ಆರೋಪಿ ಪರ ಶ್ರೀ. N.M.N. ವಕೀಲರಿಂದ**

ನಾನು ಪಿರ್ಯಾದಿಯ ಸಂಸ್ಥೆಯಲ್ಲಿ ಕಳೆದ 5 ವರ್ಷಗಳಿಂದ ಶಾಖಾ ವ್ಯವಸ್ಥಾಪಕನಾಗಿ ಕರ್ತವ್ಯ ನಿರ್ವಸುತ್ತಿದ್ದೇನೆ. ನಿಪಿ 1 ಕ್ಕೆ ಸಂಬಂಧಿಸಿದಂತೆ ಆಡಳಿತ ಮಂಡಳಿಯ ಠರಾವು ದಿನಾಂಕಃ 11-06-2020 ರಂದು ಆಗಿರುತ್ತದೆ ಎಂದರೆ ಸರಿ. ನಿಪಿ 1 ನ್ನು ಪಡೆದುಕೊಂಡ ನಂತರದಲ್ಲಿ ನಾನು ನ್ಯಾಯಾಲಯದಲ್ಲಿ ಸಾಕಷ್ಟು ಪ್ರಕರಣಗಳನ್ನು ದಾಖಲಿಸಿ ಸಾಕ್ಷಿ ನುಡಿದು ಬಂದಿರುತ್ತೇನೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾದ ಠರಾವನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ. ಈ ಪ್ರಕರಣವನ್ನು ದಾಖಲಿಸುವಂತೆ ನಮ್ಮ ಪಿರ್ಯಾದಿ ಸಂಸ್ಥೆಯಲ್ಲಿ ಠರಾವು ಆಗಿರುತ್ತದೆಯಾ ಎಂದರೆ ಸಾಕ್ಷಿಯು ನಿಪಿ 1 ನ್ನು ಹೊರತು ಪಡಿಸಿ ಬೇರೆ ಯಾವುದೇ ಠರಾವು ಇರುವುದಿಲ್ಲಾ ಎಂದು ನುಡಿದಿರುತ್ತಾರೆ . ಈ ಪ್ರಕರಣವನ್ನು ದಾಖಲಿಸುವ ಕುರಿತು ಆಡಳಿತ ಮಂಡಳಿಯಲ್ಲಿ ಆದ ಠರಾವು ಅನ್ನು ಹಾಜರುಪಡಿಸಿಲ್ಲಾ ಎಂದರೆ ಸಾಕ್ಷಿಯು ನಿಪಿ 1 ರಲ್ಲಿ ನನಗೆ ಎಲ್ಲಾ ಪ್ರಕರಣಗಳನ್ನು ದಾಖಲಿಸಲು ಹಾಗೂ ನಡೆಸಲು ಅಧಿಕಾರವನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ .

ಯಾವುದೇ ಒಂದು ಪ್ರಕರಣವನ್ನು ದಾಖಲಿಸಲು ನಮ್ಮ ಆಡಳಿತ ಮಂಡಳಿ ಸಭೆಯಲ್ಲಿ ತೀರ್ಮಾನ ಗೊಂಡು ಆ ಪ್ರಕಾರ ಠರಾವು ಆಗಬೇಕು ಎಂದರೆ ಸರಿಯಲ್ಲ. ನಮ್ಮ ಪಿರ್ಯಾದಿ ಸಂಸ್ಥೆಯಲ್ಲಿ ಯಾವುದೇ ಒಂದು ಪ್ರಕರಣವನ್ನು ದಾಖಲಿಸಲು ನಮ್ಮ ಪಿರ್ಯಾದಿ ಸಂಸ್ಥೆಯಲ್ಲಿ ಪ್ರತ್ಯೇಕವಾದ ಠರಾವನ್ನು ಮಾಡುವುದಿಲ್ಲ.

ನಿಪಿ 2 ಎ ಹಾಗೂ ನಿಪಿ 6 ಎ ರಲ್ಲಿ ವ್ಯತ್ಯಾಸ ಇದೆ ಎಂದರೆ ಸಾಕ್ಷಿಯು ಸದರಿ ಸಹಿ ಆರೋಪಿತನದ್ದಾಗಿದ್ದು ಆ ಸಹಿ ಸ್ವಲ್ಪ ಚಿಕ್ಕದ್ದು ಸ್ವಲ್ಪ ದೊಡ್ಡದು ಇದೆ ಎಂದು ನುಡಿಯುತ್ತಾರೆ.

**ಸಿ.ಸಿ.ನಂ.:**2347/2024

ಪಿ.ಡಬ್ಲ್ಯೂ:1

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಪ್ರಧಾನ ಪ್ರಭಾರ ಪ್ರ.ದ.ನ್ಯಾ.ದಂ. ಕುಮಟಾ